**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2017–18** **ದಿನಾಂಕ: 04–11–2017**

# ಪತ್ರಿಕಾ ಆಮಂತ್ರಣ

1. ಸಾವಯವ ಮತ್ತು ಸಿರಿಧಾನ್ಯಗಳು 2018 ಅಂತರರಾಷ್ಟ್ರೀಯ ವಾಣಿಜ್ಯ ಮೇಳ – ಮೇಳದ ಅನಾವರಣ.

   ಭಾಗವಹಿಸುವಿಕೆ

   ಕೃಷ್ಣ ಬೈರೇಗೌಡ, ಕೃಷಿ ಸಚಿವರು, ಕರ್ನಾಟಕ ಸರ್ಕಾರ.

   ದಿನಾಂಕ: 6–11–2017, ಸೋಮವಾರ, ಸಮಯ : ಬೆಳಿಗ್ಗೆ 10.30 ಗಂಟೆಗೆ.

   ಸ್ಥಳ: ಐಟಿಸಿ ವಿಂಡ್ಸರ್ 25, ವಿಂಡ್ಸರ್ ಸ್ಕ್ವೇರ್, ಗಾಲ್ಫ್ ಕೋರ್ಸ್ ರಸ್ತೆ, ಬೆಂಗಳೂರು.

2. ಕನ್ನಡ ಚಲನಚಿತ್ರ ಪರಂಪರೆಯ ಸಂರಕ್ಷಣೆ ಮತ್ತು ಸಂಗ್ರಹ – ವಿಚಾರ ಸಂಕಿರಣ:

ಉದ್ಘಾಟನೆ:

ಡಾ ಬಿ. ಸರೋಜಾದೇವಿ, ಪದ್ಮಭೂಷಣ ಪುರಸ್ಕೃತ ಪಂಚಭಾಷಾ ತಾರೆ

ಅಧ್ಯಕ್ಷತೆ:

ಎಸ್.ವಿ. ರಾಜೇಂದ್ರಸಿಂಗ್‌ಬಾಬು, ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ,

ದಿನಾಂಕ: 6–11–2017, ಸೋಮವಾರ, ಸಮಯ: ಸಂಜೆ 4.00 ಗಂಟೆಗೆ.

ಸ್ಥಳ: ಚಾಮುಂಡೇಶ್ವರಿ ಸ್ಟುಡಿಯೋ, ಮಿಲ್ಲರ್ಸ್ ರಸ್ತೆ, ಬೆಂಗಳೂರು.

3. ಸಂತ ಶ್ರೇಷ್ಠ ಕನಕದಾಸರ ಜಯಂತಿ – 2017
'ಕನಕ ಗೌರವ' ಹಾಗೂ 'ಕನಕ ಯುವ ಪುರಸ್ಕಾರ ' ಪ್ರದಾನ ಹಾಗೂ ಕನಕ ಸಾಹಿತ್ಯಲೋಕ ಪ್ರಬಂಧಸ್ಪರ್ಧೆ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಸಮಾರಂಭ.

<u>ಕನಕ ಪುರಸ್ಕಾರ ಪ್ರದಾನ:</u>
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

<u>ಪುರಸ್ಕೃತರು:</u>
**<u>'ಕನಕ ಗೌರವ ಪುರಸ್ಕಾರ':</u>**
ಡಾ. ಕಬ್ಬಿನಾಲೆ ವಸಂತ ಭಾರದ್ವಾಜ,
ಹಿರಿಯ ವಿದ್ವಾಂಸರು.

**<u>'ಕನಕಯುವ ಪುರಸ್ಕಾರ':</u>**
ಡಾ. ಗವಿಸಿದ್ಧಪ್ಪ ಎಚ್. ಪಾಟೀಲ,
ಯುವ ಲೇಖಕರು.

ದಿನಾಂಕ: 6–11–2017, **ಸೋಮವಾರ, ಸಮಯ:** ಸಂಜೆ 6.00 ಗಂಟೆಗೆ.
ಸ್ಥಳ: ವಿಧಾನಸೌಧ ಮುಂಭಾಗ, ಬೆಂಗಳೂರು.

4. ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಪುಸ್ತಕೋದ್ಯಮ–ಇತ್ತೀಚಿನ ಬೆಳವಣಿಗೆಗಳು– ಸಂವಾದ ಕಾರ್ಯಕ್ರಮ:

<u>ಉದ್ಘಾಟನೆ:</u>
ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.

<u>ಮುಖ್ಯ ಅತಿಥಿಗಳು:</u>
ಡಾ. ಸತೀಶಕುಮಾರ್ ಎಸ್. ಹೊಸಮನಿ, ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.

ಅಧ್ಯಕ್ಷತೆ:
ಡಾ. ವಸುಂಧರಾ ಭೂಪತಿ, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ.

ದಿನಾಂಕ: 07-11-2017, ಮಂಗಳವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಮಹಿಳೆಯರ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.

ಸಂಖ್ಯೆ:267/387

ಪತ್ರಿಕಾ ಪ್ರಕಟಣೆ

# ಕನಕ ಗೌರವ ಹಾಗೂ ಕನಕ ಯುವ ಪುರಸ್ಕಾರ – 2017

**ಬೆಂಗಳೂರು, ನವೆಂಬರ್ 4 (ಕರ್ನಾಟಕ ವಾರ್ತೆ)**

**ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರ ಬಗ್ಗೆ ಅಧ್ಯಯನ ಪೂರ್ಣ ಅಭ್ಯಾಸ ಮಾಡಿ ಪ್ರಕಟಣೆಗಳನ್ನು ಹೊರತರುತ್ತಿರುವ ಕನಕದಾಸರ ಸಾಹಿತ್ಯ ಸಂದೇಶಗಳನ್ನು ಅಧ್ಯಯನಮಾಡಿ ಪ್ರಚಾರ ಮಾಡುತ್ತಿರುವ ಹಿರಿಯ ವಿದ್ವಾಂಸರಿಗೆ ನೀಡುವ ಕನಕ ಗೌರವ ಪುರಸ್ಕಾರಕ್ಕಾಗಿ ಪ್ರತಿವರ್ಷ ರೂ 75,000 ರೂ. ಹಾಗೂ ಕಿರಿಯ ವಿದ್ವಾಂಸರಿಗೆ ನೀಡುವ ಕನಕ ಯುವ ಪರುಸ್ಕಾರಕ್ಕೆ ರೂ 50,000 ಗಳ ನಗದು, ಪ್ರಶಸ್ತಿ ಫಲಕವನ್ನು ನೀಡಿ ಗೌರವಿಸುವ ಯೋಜನೆ ಹಾಕಿಕೊಂಡಿದೆ.**

**2017 ನೇ ಸಾಲಿನ ಕನಕ ಗೌರವ ಪುರಸ್ಕಾರಕ್ಕಾಗಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಮೈಸೂರು ಹಾಗೂ ಕನಕ ಯುವ ಪುರಸ್ಕಾರಕ್ಕಾಗಿ ಡಾ. ಗವಿಸಿದ್ದಪ್ಪ ಎಚ್. ಪಾಟೀಲ, ಬೀದರ್ ಇವರುಗಳನ್ನು ಆಯ್ಕೆ ಮಾಡಲಾಗಿದೆ.**

**ಪ್ರಶಸ್ತಿ ವಿಜೇತರ ಕಿರು ಪರಿಚಯ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಅವರು ಭಾಷೆ, ವ್ಯಾಕರಣ, ಛಂದ:ಶಾಸ್ತ್ರಗಳಲ್ಲಿ ಅಳವಾದ ವಿದ್ವತ್ತನ್ನು ಪಡೆದು ಕನ್ನಡದ ಪಂಡಿತ ಪರಂಪರೆಗೆ ಹೊಸಕಾಲದ ಭರವಸೆಯನ್ನು ನೀಡುತ್ತಿರುವ ವಿದ್ವಾಂಸರಾಗಿದ್ದಾರೆ. ಇವರು ಅಷ್ಟಾವಧಾವನಿಗಳು ಸಹ. ಯಕ್ಷಗಾನ ಕಾವ್ಯಸೃಷ್ಟಿ, ಹೊಸಚಿಂತನೆಯ ಗಮಕ ವ್ಯಾಖ್ಯಾನ, ಶಾಸ್ತ್ರ ಮತ್ತು ಕಲೆಗಳ ಅನುಸಂಧಾನ, ಅಪ್ರತಿಮ ವಾಗ್ಮಿತೆ ಮುಂತಾದ ವಿಶೇಷ ಪ್ರತಿಬೆಗಳ ಸಂಗಮ. ಯಕ್ಷಗಾನ ಛಂದಸ್ಸಿನ ಕುರಿತಾದ ಸಂಶೋಧನಾ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದಿರುವ ಇವರು ಕಾವ್ಯ, ಕಥೆ, ಅನುವಾದ, ಸಂಶೋಧನೆ, ವಿಮರ್ಶೆ, ನಿಘಂಟು ರಚನೆ, ಗ್ರಂಥ ಸಂಪಾದನೆ, ಗೀತರೂಪಕ ಮುಂತಾದ ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಕನಕದಾಸರನ್ನು ಕುರಿತು ವಿಶೇಷವಾಗಿ ಅಧ್ಯಯನ ಮಾಡುತ್ತಿರುವ ಶ್ರೀಯುತರು 'ಕನಕ ತರಂಗಿಣಿ', 'ಕನಕ ವಧೂಟಿ' 'ಕನಕದಾಸರ ಕಾವ್ಯ ಭಾಷೆ', ಮುಂತಾದ ಕೃತಿಗಳನ್ನು ರಚಿಸಿದ್ದಾರೆ ಹಾಗೂ ಕನಕ ಕಾವ್ಯ ವಿಶಿಷ್ಟಾರ್ಥಕೋಶ ಎಂಬ ಯೋಜನೆಯಲ್ಲಿ ತೊಡಗಿಕೊಂಡಿದ್ದಾರೆ. ಕನಕ ಸಾಹಿತ್ಯವನ್ನು ತುಳು ಭಾಷೆಗೆ ಅನುವಾದಿಸಿದ್ದಾರೆ.

ಡಾ. ಗವಿಸಿದ್ದಪ್ಪ ಎಚ್. ಪಾಟೀಲ ಅವರು ಕೆಳ ಸಮುದಾಯದ ದಾರ್ಶನಿಕ, ಚಿಂತಕ, ದಾಶ ಶ್ರೇಷ್ಠ, ಅಧ್ಯತ್ಮಾ ಮನೋಧರ್ಮಿ, ಸಾಮಾಜಿಕ ಕಳಕಳಿಯ ಮಾನವೀಯ ಮೌಲ್ಯ ಪ್ರತಿಪಾದಕ ಕನಕದಾಸರ ಕುರಿತಾದ ಕಾವ್ಯ, ಲೇಖನ, ಭಾಷಣ, ಸಂಘಟನೆ ಮಾಡಿ ಕನಕದಾಸರ ಕುರಿತಾದ ವಿಚಾರ ಸಂಕಿರಣ, ಕಮ್ಮಟ, ಸಂವಾದ, ಜಯಂತಿಗಳಲ್ಲಿ ಪ್ರಬುದ್ಧ ಪ್ರಬಂಧ ಮಂಡಿಸಿದ್ದಾರೆ. ಗಡಿಭಾಗದಲ್ಲಿ ಕನಕರ ಸಂದೇಶ ಪ್ರಸಾರ ಮಾಡುತ್ತಿದ್ದಾರೆ. 'ಕನಕಸಿರಿ', 'ಕನಕ ಚಿಂತನೆ', 'ಜೀವ ಯಾವ ಕುಲ? 'ಕನಕದಾಸರು ಮತ್ತು ಅಂಬೇಡ್ಕರ್' ಮುಂತಾದ ಪುಸ್ತಕಗಳನ್ನು ಹೊರತಂದಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ:268/388

## ಕನಕದಾಸರ ಸಚಿತ್ರ ಕಥಾ ಮಾಲಿಕೆ ಬಿಡುಗಡೆ

ಬೆಂಗಳೂರು, ನವೆಂಬರ್ 4 (ಕರ್ನಾಟಕ ವಾರ್ತೆ)

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರನ್ನು ವಿಭಿನ್ನ ನೆಲೆಯಲ್ಲಿ ಅಧ್ಯಯನ ಮಾಡುವ ಹಾಗೂ ಅವರ ಕಾವ್ಯದರ್ಶನ ಮತ್ತು ಜೀವನ ದರ್ಶನವನ್ನು ವಿವಿಧ ಮಾಧ್ಯಮಗಳಲ್ಲಿ ಪ್ರಚುರಪಡಿಸುವ ಉದ್ದೇಶದಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಇವುಗಳಲ್ಲಿ ಮಕ್ಕಳಿಗಾಗಿ ಸಿದ್ಧಪಡಿಸಿರುವ ವಿನೂತನವಾದ ಒಂದು ಪ್ರಯತ್ನ 'ಕನಕದಾಸರ ಸಚಿವತ್ರ ಕಥಾ ಮಾಲಿಕೆ' ಕನಕದಾಸರ ಜೀವನ ಮತ್ತು ಅವರ ನಾಲ್ಕು ಕಾವ್ಯಗಳನ್ನೊಳಗೊಂಡ ಮೋಹನರ ತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತ್ರೆ, ಹರಿಭಕ್ತಿಸಾರ ಹಾಗೂ ಕೀರ್ತನೆಗಳನ್ನು ಚಿತ್ರಗಳ ಮೂಲಕ ಕಥಾನಕದ ರೂಪದಲ್ಲಿ ಹೊರತರುತ್ತಿರುವುದು ಈ ಬಿಡುಗಡೆ ಮಾಲಿಕೆ ಆಶಯ. ಹೀಗೆ ಜೀವನ ಸಾಹಿತ್ಯ ಹಾಗೂ 5 ಗ್ರಂಥಗಳನ್ನು ಪರಿಚಯಿಸುವ ನೆಲೆಯಲ್ಲಿ ಸಂಭಾಷಣಾ ರೂಪದಲ್ಲಿ ಒಬ್ಬೊಬ್ಬ ವಿದ್ವಾಂಸರಿಂದ ಸಾಹಿತ್ಯವನ್ನು ಸಿದ್ಧಪಡಿಸಲಾಗಿದೆ. ಈ ಸಂಭಾಷಣಾ ಸಾಹಿತ್ಯಕ್ಕೆ ಹಿರಿಯ ಚಿತ್ರಕಲಾವಿದರಾದ ಬಿ. ಜಿ. ಗುಜ್ಜಾರಪ್ಪ ಮತ್ತು ತಂಡ ಚಿತ್ರಗಳನ್ನು ರಚಿಸಿದೆ. ಪ್ರತಿ ಗ್ರಂಥವು ಬಹುವರ್ಣಗಳಲ್ಲಿ ಮುದ್ರಣಕ್ಕಾಗಿ ಮಕ್ಕಳಿಗೆ ಆಕರ್ಷಕ ರೀತಿಯಲ್ಲಿ ಕನಕದಾಸರ ಬಗ್ಗೆ ಅರಿವುಂಟು ಮಾಡುವ ಪ್ರಕಟಣೆ ಇದಾಗಿದೆ.

ಹೀಗೆ ಮಕ್ಕಳಿಗಾಗಿ ಸಿದ್ಧಪಡಿಸಿರುವ ಸಚಿತ್ರ ಕಥಾ ಮಾಲೆಯ ಆರು ಗ್ರಂಥಗಳನ್ನು ಒಂದೊಂದು ಗ್ರಂಥವನ್ನು ಒಬ್ಬೊಬ್ಬ ವಿದ್ಯಾರ್ಥಿ ಬಿಡುಗಡೆಮಾಡಿ ಆ ವಿದ್ಯಾರ್ಥಿ 10 ನಿಮಿಷ ಕೃತಿಯ ಬಗ್ಗೆ ತಾನು ಗ್ರಹಿಸಿದ ಬಗೆಯನ್ನು ವಿವರಿಸುತ್ತಾನೆ. ಹೀಗೆ ಆರು ಕೃತಿಗಳನ್ನು ಒಬ್ಬೊಬ್ಬ ವಿದ್ಯಾರ್ಥಿ ಬಿಡುಗಡೆಗೊಳಿಸಿ ಮಾತನಾಡಿದ ಮೇಲೆ ಇತರೆ ವಿದ್ಯಾರ್ಥಿಗಳ ಪ್ರತಿಕ್ರಿಯೆಗೆ ಅವಕಾಶ ಕಲ್ಪಿಸಲಾಗಿದೆ.

ಹೀಗಾಗಿ ಒಟ್ಟು ಆರು ಕೃತಿಗಳನ್ನು ಆರು ಜನ ವಿದ್ಯಾರ್ಥಿಗಳು ಬಿಡುಗಡೆ ಮಾಡುತ್ತಾರೆ. ಉಳಿದ ವಿದ್ಯಾರ್ಥಿಗಳೂ ಈ ಚರ್ಚೆಯಲ್ಲಿ ಭಾಗಹಿಸಲಿದ್ದು, ವಿದ್ಯಾರ್ಥಿಗಳು ಸಂವಾದದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುಕೂಲವಾಗುವಂತೆ ಆಯ್ಕೆಮಾಡಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ಆರು ಪುಸ್ತಕಗಳ ಸೆಟ್‌ನ್ನು ಕಳುಹಿಸಲಾಗಿದೆ.

ಅಕ್ಟೋಬರ್ 9 ರಂದು ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನ ನಯನ ಸಭಾಂಗಣದಲ್ಲಿ 'ಕನಕದಾಸರ ಸಚಿತ್ರ ಕಥಾ ಮಾಲಿಕೆ' ಬಿಡುಗಡೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಈ ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ಲೇಖಕ ಬೊಳವಾರ ಮಹಮದ್ ಕುಂಞ ಆವರು ವಹಿಸಲಿದ್ದಾರೆ.

ವಿಶೇಷವಾದ ಮಕ್ಕಳಿಂದ, ಮಕ್ಕಳಿಗಾಗಿ, ಮಕ್ಕಳಿಗೋಸ್ಕರ ವಿನ್ಯಾಸಗೊಳಿಸಿರುವ ಈ ಕಾರ್ಯಕ್ರಮಕ್ಕೆ ಸರ್ಕಾರಿ ಪ್ರೌಢ ಶಾಲೆ, ಬೆಂಗಳೂರು ಮಹಾನಗರ ಪಾಲಿಕೆಯ ಪ್ರೌಢಶಾಲೆ ಮತ್ತು ಖಾಸಗಿ ಪ್ರೌಢ ಶಾಲೆಗಳನ್ನೊಳಗೊಂಡಂತೆ ಸುಮಾರು 12 ಶಾಲೆಗಳಿಂದ 145 ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ:269/389

## ಅಂತಿಮ ಆಯ್ಕೆಪಟ್ಟಿ ಪ್ರಕಟ

**ಬೆಂಗಳೂರು, ನವೆಂಬರ್ 4 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು 2016ನೇ ಸಾಲಿನ ಕರ್ನಾಟಕ ರಾಜ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿನ ಸಮೂಹ 'ಎ' ವೃಂದದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಒಟ್ಟು 25 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಂತಿಮ ಆಯ್ಕೆಪಟ್ಟಿಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ:270/390

## ರಾಜ್ಯದ 3,27,018 ರೈತರಿಗೆ ಸಾಲ ಮನ್ನಾ ಯೋಜನೆಯ ಪ್ರತಿಫಲ

**ಬೆಂಗಳೂರು, ನವೆಂಬರ್ 4 (ಕರ್ನಾಟಕ ವಾರ್ತೆ)**

ಕಳೆದ 3 ವರ್ಷಗಳಲ್ಲಿ ತೀವ್ರ ಬರ ಪರಿಸ್ಥಿತಿಯಿಂದ ರೈತರು ಅನುಭವಿಸಿದ ಸಂಕಷ್ಟವನ್ನು ಸರ್ಕಾರ ಮನಗಂಡು ರೈತರ ನೆರವಿಗೆ ಧಾವಿಸಿ, ಸಹಕಾರ ಸಂಸ್ಥೆಗಳಿಂದ ಅಲ್ಪಾವಧಿ ಕೃಷಿ ಸಾಲ ಪಡೆದು ದಿನಾಂಕ: 20-6-2017 ರ

ವರೆಗೆ ಬಾಕಿ ಹೊಂದಿರುವ ಎಲ್ಲಾ ರೈತರಿಗೂ ಅಸಲು ಮತ್ತು ಬಡ್ಡಿ ಸೇರಿ ರೂ.50000 ಗಳವರೆಗೆ ಸಾಲ ಮನ್ನಾ ಮಾಡಲು ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ 21–06–2017 ರಂದು ಘೋಷಣೆ ಮಾಡಿರುತ್ತಾರೆ. ಅದರಂತೆ ದಿನಾಂಕ:23–06–2017 ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ.

ಈ ಸಾಲ ಮನ್ನಾ ಯೋಜನೆಯಡಿ ಅಂದಾಜು ರೂ.8165 ಕೋಟಿ ಮನ್ನಾ ಆಗುವುದಿದ್ದು, 22,27,506 ರೈತರಿಗೆ ಈ ಸೌಲಭ್ಯ ದೊರೆಯುತ್ತದೆ. ಈ ಯೋಜನೆಯಡಿಯಲ್ಲಿ ಮನ್ನಾ ಮಾಡಿದ ಸಾಲವು, ರೈತರು ಸಾಲ ಪಡೆದು ಸಾಲ ಮರುಪಾವತಿ ಮಾಡುವ ಗಡುವು ದಿನಾಂಕಕ್ಕೆ ಜಾರಿಗೆ ಬರುತ್ತದೆ.

ಸಾಲ ಮನ್ನಾ ಯೋಜನೆಯಡಿ ಜೂನ್ 2017 ರಿಂದ ಆಗಸ್ಟ್ 2017 ರ ವರೆಗೆ ಡಿಸಿಸಿ ಬ್ಯಾಂಕುಗಳು ಸಲ್ಲಿಸಿದ ಬಿಲ್ಲುಗಳಿಗೆ ಸರ್ಕಾರವು ದಿನಾಂಕ 31–10–2017 ರ ಆದೇಶದಲ್ಲಿ ರೂ.1064 ಕೋಟಿ ಬಿಡುಗಡೆ ಮಾಡಿದೆ. ಇದರ ಪ್ರಯೋಜನವನ್ನು ರಾಜ್ಯದ 3,27,018 ರೈತರು ಪಡೆಯಲಿದ್ದಾರೆ. ಬ್ಯಾಂಕುವಾರು ಬಿಡುಗಡೆ ಮಾಡಿದ ಮೊತ್ತ ಹಾಗೂ ಅದರಿಂದ ಅನುಕೂಲ ಹೊಂದಿದ ರೈತರ ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಡಿಸಿಸಿ ಬ್ಯಾಂಕಿನ ಹೆಸರು | ಸಾಲ ಮನ್ನಾ ಫಲಾನುಭವಿಗಳ ಸಂಖ್ಯೆ | ಸಾಲ ಮನ್ನಾ ಬಿಡುಗಡೆ ಮಾಡಿದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಬಾಗಲಕೋಟೆ | 23194 | 10430.64 |
| 2 | ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ | 18331 | 7244.10 |
| 3 | ಬೆಳಗಾವಿ | 5439 | 1100.36 |
| 4 | ಬಳ್ಳಾರಿ | 21589 | 9278.83 |
| 5 | ಬೀದರ್ | 6102 | 1540.54 |
| 6 | ಬಿಜಾಪುರ | 20083 | 7064.78 |
| 7 | ಚಿತ್ರದುರ್ಗ | 14723 | 4067.01 |
| 8 | ದಾವಣಗೆರೆ | 21454 | 5709.36 |
| 9 | ಧಾರವಾಡ, ಗದಗ ಮತ್ತು ಹಾವೇರಿ | 16777 | 4816.27 |
| 10 | ಕಲಬುರ್ಗಿ ಮತ್ತು ಯಾದಗಿರಿ | 27867 | 6574.87 |
| 11 | ಹಾಸನ | 19294 | 6641.34 |
| 12 | ಕೊಡಗು | 510 | 194.20 |
| 13 | ಕೋಲಾರ ಮತ್ತು ಚಿಕ್ಕಬಳ್ಳಾಪುರ | 2938 | 1314.08 |
| 14 | ಮಂಡ್ಯ | 28296 | 9879.65 |
| 15 | ಮೈಸೂರು ಮತ್ತು ಚಾಮರಾಜನಗರ | 22805 | 7270.41 |
| 16 | ಉತ್ತರ ಕನ್ನಡ | 2677 | 646.56 |
| 17 | ರಾಯಚೂರು ಮತ್ತು ಕೊಪ್ಪಳ | 26941 | 6361.79 |
| 18 | ಶಿವಮೊಗ್ಗ | 7335 | 1895.85 |
| 19 | ದಕ್ಷಿಣ ಕನ್ನಡ ಮತ್ತು ಉಡುಪಿ | 23223 | 9922.98 |
| 20 | ತುಮಕೂರು | 17440 | 4446.38 |

| | | | |
|---|---|---|---|
| | ಒಟ್ಟು | 327018 | 106400.00 |

ಸೆಪ್ಟಂಬರ್ 2017 ರಿಂದ ಜೂನ್ 2018 ರ ವರೆಗೆ ರೈತರು ಸಾಲ ಮರುಪಾವತಿಸಲು ನಿಗದಿಪಡಿಸಿದ ಗಡುವು ದಿನಾಂಕಕ್ಕೆ ಅನುಗುಣವಾಗಿ ಡಿಸಿಸಿ ಬ್ಯಾಂಕುಗಳು ಕ್ಲೇಂ ಬಿಲ್ಲುಗಳನ್ನು ಸಲ್ಲಿಸಲು ಅವಕಾಶಇದ್ದು, ಬಿಲ್ಲುಗಳ ಸ್ವೀಕೃತಿ ಅನುಗುಣವಾಗಿ ಸಾಲ ಮನ್ನಾ ಮೊತ್ತವನ್ನು ಬಿಡುಗಡೆ ಮಾಡಲು ಕ್ರಮವಿಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸಂಖ್ಯೆ:271/391

# ಮೂಲ ದಾಖಲೆಗಳ ಪರಿಶೀಲನೆ – ಅರ್ಹತಾ ಪಟ್ಟಿ ಜಾಲತಾಣದಲ್ಲಿ ಪ್ರಕಟ

**ಬೆಂಗಳೂರು, ನವೆಂಬರ್ 4 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿನ ಮಹಿಳಾ ಮೇಲ್ವಿಚಾರಕಿಯರ 643 ( 592+51 ಹೈ.ಕ.) ಹುದ್ದೆಗಳ ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ದಿನಾಂಕ 4-11-2017 ರಂದು ಆಯೋಗದ ಜಾಲತಾಣದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.